# ಅವಿಶ್ವಾಸ ಗೊತ್ತುವಳಿ ಕುರಿತು ಇಂದು ಹೊರಟ್ಟಿ ನೇತೃತ್ವದಲ್ಲಿ ಸಭೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು 15/12/2020



ವಿಧಾನಪರಿಷತ್ ಸಭಾಪತಿಗಳ ವಿರುದ್ಧ ಅವಿಶ್ವಾಸ ಗೊತ್ತುವಳಿ ವಿಚಾರ ಸಂಬಂಧ ಪರಿಷತ್ತಿನ ಪಕ್ಷದ ನಾಯಕ ಬಸವರಾಜ ಹೊರಟ್ಟಿ ನೇತೃತ್ವದಲ್ಲಿ ಮಂಗಳವಾರ ಸಭೆ ನಡೆಸಿ ಜೆಡಿಎಸ್ ಅಂತಿಮ ನಿರ್ಧಾರಮಾಡಲಿದೆಎಂದುಮಾಜಿಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿಸೋಮವಾರಸುದ್ದಿಗಾರರೊಂದಿಗೆಮಾತನಾಡಿದ ಕುಮಾರಸ್ವಾಮಿ ಅವರು, 'ಈ ಹಿಂದೆ ಮೈತ್ರಿ ಸರ್ಕಾರದ ವೇಳೆ ಹೊರಟ್ಟಿ ಅವರಿಗೆ ಸಭಾಪತಿ ಸ್ಥಾನ ಕೊಡುವ ವಿಚಾರದಲ್ಲಿ ಕಾಂಗ್ರೆಸ್ ಸಹಕಾರ ಕೊಟ್ಟಿರಲಿಲ್ಲ. ಈ ಬಗ್ಗೆ ದೆಹಲಿಗೆ ತೆರಳಿ ದೇವೇಗೌಡರು ಮಾತನಾಡಿದ್ದರೂ ಪ್ರಯೋಜನವಾಗಿರಲಿಲ್ಲ' ಎಂದು ಹೇಳಿದರು.

'ಆಗಿನ ಸ್ಥಿತಿ ಆಗಲೇ ಮುಕ್ತಾಯವಾಗಿದೆ. ಈಗ ಹೊಸದೊಂದು ಪರ್ವ ಶುರುವಾಗಿದೆ. ಅನಿರ್ದಿಷ್ಟಾವಧಿಗೆ ಸದನ ಮುಂದೂಡಿದ ಬಳಿಕ ಸಂಪುಟ ಸಭೆಯಲ್ಲಿ ನಿರ್ಣಯಿಸಿದ ಬಳಿಕ ಮತ್ತೆ ಸದನ ಕರೆಯಬೇಕಿತ್ತು. ಈಗ ಪರಿಷತ್ ಕಾರ್ಯದರ್ಶಿ ಮೂಲಕ ಸದನ ಕರೆಯಲಾಗಿದೆ. ಈ ಬೆಳವಣಿಗೆಯನ್ನು ಕಾಂಗ್ರೆಸ್ ಹೇಗೆ ದುರ್ಬಳಕೆ ಮಾಡುತ್ತದೋ ಗೊತ್ತಿಲ್ಲ' ಎಂದು ಟೀಕಿಸಿದರು.

**ಗೋ ಹತ್ಯೆ ಕಾಯ್ದೆಗೆ ವಿರೋಧ:** ಗೋ ಹತ್ಯೆ ನಿಷೇಧ ಕಾಯ್ದೆ ವಿಚಾರದಲ್ಲಿ ಪಕ್ಷದ ತೀರ್ಮಾನ ಅಚಲವಾಗಿದೆ. ಸದನದಲ್ಲಿ ಕಾಯ್ದೆಯನ್ನು ಜೆಡಿಎಸ್ ಪಕ್ಷ ವಿರೋಧಿಸಲಿದೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಸ್ಪಷ್ಟಪಡಿಸಿದರು.

# ಇಂದು ಪರಿಷತ್‌ಗೆ ಹಾಜರಾಗಲು ಕಾಂಗ್ರೆಸ್ ವಿಪ್

ಬೆಂಗಳೂರು: ಮಂಗಳವಾರ ವಿಧಾನಪರಿಷತ್ ಕಲಾಪ ನಡೆಯಲಿರುವ ಹಿನ್ನೆಲೆಯಲ್ಲಿ ಅಧಿವೇಶನದಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ಪಕ್ಷದ ಎಲ್ಲ ಸದಸ್ಯರಿಗೆ ಕಾಂಗ್ರೆಸ್ ವಿಪ್ (ಸಚೇತಕಾಜ್ಞೆ) ಜಾರಿ ಮಾಡಿದೆ. ಅನಿರ್ದಿಷ್ಟಾವಧಿಗೆ ಕಲಾಪವನ್ನು ಮುಂದೂಡಿದ ನಂತರ ಇದೇ ಮೊದಲ ಬಾರಿಗೆ ಪುನಃ ಡಿ.15ರಂದು ಏಕ ದಿನದ ವಿಧಾನ ಪರಿಷತ್ತು ಕಲಾಪ ನಡೆಯಲಿದೆ. ಈ ಅಧಿವೇಶನದಲ್ಲಿ ವಿವಾದಿತ ಕರ್ನಾಟಕ ಜಾನುವಾರುಗಳ ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ 2020 ಮಸೂದೆ ಮಂಡನೆಯಾಗಲಿದೆ.

ಈ ಹಿನ್ನೆಲೆಯಲ್ಲಿ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ಬೆಳಗ್ಗೆ 10.30ಕ್ಕೆ ಪಕ್ಷದ ವಿಧಾನ ಪರಿಷತ್ ಸದಸ್ಯರ ಸಭೆ ಕರೆಯಲಾಗಿದೆ.

# ಪ್ರತಾಪ್‌ಚಂದ್ರ ಶೆಟ್ಟಿ ನಡೆಗೆ ಪಾಟೀಲ್ ಸಮರ್ಥನೆ

ಬೆಂಗಳೂರು: ಶತಮಾನಗಳ ಇತಿಹಾಸವಿರುವ ವಿಧಾನಪರಿಷತ್ತಿನ ಘನತೆ, ಗೌರವಕ್ಕೆ ಚ್ಯುತಿ



ಬರದಂತೆಸಭಾಪತಿಪ್ರತಾಪಚಂದ್ರಶೆಟ್ಟಿಅವರುನಡೆದುಕೊಂಡಿದ್ದಾರೆ. ಪೀಠದ ನಿಯಮಾವಳಿಯಂತೆ ಕಾರ್ಯನಿರ್ವಹಿಸಿದ್ದಾರೆ ಎಂದು ಪರಿಷತ್ತಿನ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ್ ಅಭಿಪ್ರಾಯಪಟ್ಟಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಭಾಪತಿಯವರು ಕರ್ತವ್ಯ ನಿರ್ವಹಣೆಯಲ್ಲಿ ಪಕ್ಷಪಾತ ಅನುಸರಿಸುವ ಮೂಲಕ ಸಂವಿಧಾನದ ಆಶಯಗಳಿಗೆ ಧಕ್ಕೆ ತಂದಿದ್ದಾರೆ ಎಂದು ಆರೋಪಿಸಿ ಆಡಳಿತ ಪಕ್ಷದ 11 ಸದಸ್ಯರು ಅವಿಶ್ವಾಸ ನಿರ್ಣಯ ಮಂಡಿಸುವ ಎರಡು ಸೂಚನೆಗಳನ್ನು ನೀಡಿದ್ದರು. ಈ ಸೂಚನಾ ಪತ್ರ ಪರಿಶೀಲಿಸಿದ ಸಭಾಪತಿಯವರು ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿದ್ದು ಸಕಾರಾತ್ಮಕ ವಿವರಣೆ ನೀಡಿದ್ದಾರೆ. ಈ ಎರಡೂ ಸೂಚನಾ ಪತ್ರಗಳು ಕ್ರಮಬದ್ಧವಾಗಿ ಇಲ್ಲದ ಕಾರಣ ತಿರಸ್ಕರಿಸಿದ್ದಾರೆ ಎಂದು ತಿಳಿಸಿದರು.

ಈಗಾಗಲೇ ಕಾರ್ಯದರ್ಶಿಯವರು ಸಂಬಂಧಿಸಿದ ಸದಸ್ಯರಿಗೆ ಪತ್ರದ ಮೂಲಕ ತಿರಸ್ಕೃತಗೊಂಡಿರುವ ಮಾಹಿತಿ ನೀಡಿದ್ದಾರೆ ಎಂದು ಹೇಳಿದರು.